ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ಆದೇಶದಂತೆ
ದಿನಾಂಕ 07-08-2017 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರಮಾಣವಚನ ಬೊಧಿಸಲಾಯಿತು.

**ಪಾಟೀ ಸವಾಲುಃ 1ನೇ ಪ್ರತಿವಾದಿಯ ಪರ ಶ್ರೀ ಜೆ.ವಿ.ಹೆಚ್ ವಕೀಲರಿಂದ.**

ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲಾ. ಅದು ಸರಕಾರಿ ಜಾಗವಿತ್ತು. ಅದನ್ನು ನೇರವಾಗಿ ನನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಸಿಕೊಂಡಿದ್ದೇನೆ. ದಾವಾ ಆಸ್ತಿಯು ನನ್ನದೆಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸರಕಾರದವರು ದಾವಾ ಆಸ್ತಿಯು ನನಗೆ ಸೇರಿದೆ ಎಂದು ನನಗೆ ಹಕ್ಕು ಪತ್ರ ಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಸದರಿ ಹಕ್ಕು ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ ಹಕ್ಕು ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಖೊಟ್ಟಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯನ್ನು ನಾಲ್ಕು ಭಾಗಗಳಾಗಿ ವಿಂಗಡಣೆ ಮಾಡಲಾಗಿದೆ. ಎರಡು ಭಾಗಗಳಲ್ಲಿ ಮನೆ ಕಟ್ಟಲಾಗಿದೆ. ಯಾವ ವಾದಿಗೆ ಸೇರಿದ ದಾವಾ ಆಸ್ತಿಯಲ್ಲಿ ಮನೆ ಕಟ್ಟಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ನಾನು ಸಂಬಂಧಪಟ್ಟ ಮಂಡಲ ಪಂಚಾಯಿತಿಯಿಂದ ಅನುಮತಿ ಪಡೆದುಕೊಂಡಿದ್ದೇನೆ ಮತ್ತು ಸದರಿ ಅನುಮತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಕಿದ್ದೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ಕಟ್ಟಡ ಪರವಾನಿಗೆ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ.

ದಾವಾ ಆಸ್ತಿಯು ಇರುವ ಸರ್ವೆ ನಂಬರ 60 ಎಂದು ನಮೂದು ಮಾಡಲಾಗಿದೆ. ಸದರಿ ಸರ್ವೆ ನಂಬರ ಒಟ್ಟು ಎಷ್ಟು ಎಕರೆ ವಿಸ್ತೀರ್ಣ ಇದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರನಲ್ಲಿ ಎಷ್ಟು ಮನೆಗಳಾಗಿವೆ ಎಂದರೆ ಸಾಕ್ಷಿದಾರರು ಒಂದು ಊರೇ ನಿರ್ಮಾಣವಾಗಿದೆ ಆದರೆ ಎಷ್ಟು ಮನೆಗಳಾಗಿವೆ ಎಂದು ಹೇಳಲು ಬರುವುದಿಲ್ಲಾ ಎನ್ನುತ್ತಾರೆ. ಸರ್ವೆ ನಂಬರ 60 ರಲ್ಲಿ 1ನೇ ಪ್ರತಿವಾದಿಗೆ ಸೇರಿದ ಒಂದು ಮನೆ ಇದೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು 1ನೇ ಪ್ರತಿವಾದಿಯ ಮನೆ ನನ್ನ ಮನೆಯ ಪಕ್ಕದಲ್ಲಿಲ್ಲ ಅದು 200 ರಿಂದ 300 ಅಡಿ ದೂರದಲ್ಲಿದೆ ಎನ್ನುತ್ತಾರೆ. ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿಗೆ ಸರಕಾರಿ ರಸ್ತೆ ಇದೆ ಎಂದರೆ ಸರಿ ಅಲ್ಲ. 1ನೇ ಪ್ರತಿವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ನನ್ನ ಮನೆ ಇದೆ ಎಂದರೆ ಸಾಕ್ಷಿದಾರರು 1ನೇ ಪ್ರತಿವಾದಿಯು ಗುಂಡಾಗಿರಿ ಮಾಡಿ ನನ್ನ ಮನೆಯ ಪಕ್ಕದಲ್ಲಿ ಒಂದು ತಗಡಿನ ಅಂಗಡಿ ನಿರ್ಮಿಸಿದ್ದಾನೆ ಎನ್ನುತ್ತಾರೆ, ಸಾಕ್ಷಿದಾರರು ಮುಂದುವರೆದು ಇಂದಿಗೆ 3 ವರೆ ವರ್ಷಗಳ ಹಿಂದೆ 1ನೇ ಪ್ರತಿವಾದಿಯು ಸದರಿ ತಗಡಿನ ಅಂಗಡಿ ನಿರ್ಮಿಸಿದ್ದಾನೆ ಎನ್ನುತ್ತಾರೆ. 1ನೇ ಪ್ರತಿವಾದಿಯ ಮನೆಯ ದಕ್ಷಿಣ

ದಿಕ್ಕಿಗೆ ಯಲ್ಲಪ್ಪ ಎಶೆಗಾರ ಎನ್ನುವವರ ಮನೆಯಿದೆ ಎಂದರೆ ಸರಿ ಅಲ್ಲ. 1ನೇ ಪ್ರತಿವಾದಿಯು ತನ್ನ ತಗಡಿನ ಅಂಗಡಿಯಲ್ಲಿ ಮೊಬೈಲ್ ಮತ್ತು ಫೋಟೋ ಸ್ಟುಡಿಯೋ ಬಿಜಿನೆಸ್ ಮಾಡುತ್ತಾನೆ ಎಂದರೆ ಸರಿ ಅಲ್ಲ. ನನಗೆ ಮತ್ತು ಉಳಿದ ವಾದಿಯರಿಗೆ ಸೇರಿದ ಜಾಗದಲ್ಲಿ ಪ್ರತಿವಾದಿಯರು ಯಾವುದೇ ಗೊಬ್ಬರ ಹಾಕುವ ತಿಪ್ಪಿಗಳನ್ನು ನಿರ್ಮಾಣ ಮಾಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಈ ಮೊದಲು 1ನೇ ಪ್ರತಿವಾದಿಯು ತಿಪ್ಪಿ ನಿರ್ಮಾಣ ಮಾಡಿ ನಂತರ ಈಗ ಮೊಬೈಲ್ ಅಂಗಡಿಯನ್ನು ನಿರ್ಮಿಸಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯು 1ನೇ ಪ್ರತಿವಾದಿಗೆ ಸೇರಿದೆ ಎಂದರೆ ಸರಿ ಅಲ್ಲ. ನಾನು ಮತ್ತು ಇತರ ವಾದಿಯರು ದಾವಾ ಆಸ್ತಿಯ ಸ್ವಾಧೀನತೆಯಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಮತ್ತು ಇತರ ವಾದಿಯರು ಖೊಟ್ಟಿ ಪಾಲು ವಿಭಜನೆ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ ಅಲ್ಲ. ನಾನು, ಇತರ ವಾದಿಯರು ಹಾಗೂ ಪಂಚಾಯಿತಿ ಅಧಿಕಾರಿಗಳು ಮಿಲಾಪಿಯಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಮೂಲಪ್ರತಿ ಕೆಲ್ಲೂರ ಗ್ರಾಮ ಪಂಚಾಯಿತಿಯಲ್ಲಿವೆ. ಕೆಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಮೂಲ ಪ್ರತಿ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ